1	2	3	4	5	6	7
ಉತ್ತರ ಕನ್ನಡ ಜಿಲ್ಲೆ						
1.	ಹೊನ್ನಾವರ					1
2.	ಅಂಕೋಲ					1
3.	ಹಳಿಯಾಳ		1	2	1	1
4.	ಸುಪಾ (ಜೋಯ್ಡಾ)	1		1	1	1
5.	ಯಲ್ಲಾಪುರ	1		1	1	1
6.	ದಾಂಡೇಲಿ				1	1
7.	ಭಟ್ಕಳ	1	1	1	1	1
8.	ಸಿರ್ಸಿ				1	2

ಪ್ರಾಥಮಿಕ ಶಾಲೆಗಳನ್ನು ತೆರೆಯುವ ಕುರಿತು

2873 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 20ರಿಂದ 25 ಜನ ವಿದ್ಯಾರ್ಥಿಗಳಿರುವ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆಯಲು ಸರ್ಕಾರವು ನಿರ್ಧಿಸಿರುವುದು ನಿಜವೇ; ಹಾಗಿದ್ದಲ್ಲಿ ಈ ಕುರಿತು ಆದೇಶ ಯಾವಾಗ ಜಾರಿ ಮಾಡಲಾಗುವುದು?

ಆ) ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಶಾಲೆಯನ್ನು ಮಂಜೂರು ಮಾಡಲು ಗುರುತಿಸಲಾಗಿದೆ?

ಇ) ಕೊಡಗು ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 20ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿರುವ ಕ್ರಮ ದಿ: 7.6.96 ರಿಂದ ಜಾರಿಯಲ್ಲಿದೆ.

ಆ) ರಾಜ್ಯದ 20 ಜಿಲ್ಲೆಗಳಲ್ಲಿ 1469 ಹೊಸ ಪ್ರಾಥಮಿಕ ಶಾಲೆಗಳನ್ನು 1997-98ನೇ ಸಾಲಿನಲ್ಲಿ ಗುರುತಿಸಿ ಆರಂಭಿಸಲಾಗಿದೆ.

ಇ) ಕೊಡಗು ಜಿಲ್ಲೆಯಲ್ಲಿ 35 ಗ್ರಾಮಗಳನ್ನು ಗುರುತಿಸಲಾಗಿದೆ.

ಮಡಿಕೇರಿ	07
ವಿರಾಜಪೇಟೆ	15
ಸೋಮವಾರಪೇಟೆ	13